***ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ***
***ಎಫ್ ಡಿ ಪಿ ಸಂಖ್ಯೆಃ 01/2021***

ಸಾಕ್ಷಿಯ ಹೆಸರುಃ ಸಚಿನ್ ಎಂ. ಸಿ. ಸಿ ಡಬ್ಲ್ಯೂಃ 1

ತಂದೆಯ ಹೆಸರುಃ ಚಂದ್ರಪ್ಪ

ವಯಸ್ಸುಃ 32 ವರ್ಷ

ಉದ್ಯೋಗಃ ತಾಲೂಕು ಸರ್ವೇಯರ್, ಕೊಪ್ಪ ತಾಲೂಕು

ವಾಸಃ ಕೊಪ್ಪ

ದಿನಾಂಕಃ 01/02/2025 ರಂದು ಪ್ರಮಾಣವಚನವನ್ನು ಬೋಧಿಸಲಾಯಿತು.

**ಃಃ ಮುಖ್ಯ ವಿಚಾರಣೆಃಃ**

ನನಗೆ ಈ ಎಫ್ ಡಿ ಪಿ ಪಿಟಿಷನ್ ನಲ್ಲಿ ನ್ಯಾಯಾಲಯದ ನಿಯೋಜಕನಾಗಿ ನೇಮಕಗೊಂಡು, ಕಮಿಷನರ್ ವಾರೆಂಟ್ ಬಂದಿದ್ದು ಅದರಂತೆ ವಾರೆಂಟನ್ನು ಪಡೆದುಕೊಂಡು, ಅರ್ಜಿದಾರರು ಮತ್ತು ಎದುರುದಾರರುಗಳಿಗೆ ಒಂದು ವಾರದ ಮುಂಚಿತವಾಗಿಯೇ ನೋಟೀಸನ್ನು ನೋಂದಾಯಿತ ಅಂಚೆ ಪತ್ರದ ಮುಖಾಂತರ ಕೊಟ್ಟು, ದಿನಾಂಕಃ30/10/2023 ರಂದು ಸ್ಥಳಕ್ಕೆ ಭೇಟಿ ನೀಡಿ, ಅಳತೆಯನ್ನು ಮಾಡಿರುತ್ತೇನೆ. ಅಳತೆ ಮಾಡುವ ಸಮಯದಲ್ಲಿ ಶ್ರೀಮತಿ ನಾಗರತ್ನಮ್ಮ ಕೋಂ ಬಿ ಎಸ್ ಲಕ್ಷ್ಮೀನಾರಾಯಣ ಭಟ್ ಹಾಗೂ ಅವರ ಮಕ್ಕಳು ಇದ್ದರು. ಅವರನ್ನು ಹೊರತುಪಡಿಸಿ ಆ ಸಮಯದಲ್ಲಿ ಎದುರುದಾರರು ಹಾಜರಿರಲಿಲ್ಲ.

ನಾನು ಅಳತೆ ಮಾಡಿ ನನ್ನ ವರದಿಯನ್ನು ನಕಾಶೆಯೊಂದಿಗೆ ಸಲ್ಲಿಸಿರುತ್ತೇನೆ.

ಕಮೀಷನರ್ ವಾರಂಟನ್ನು ನಿಸಿ.1 ಎಂದು ಗುರುತಿಸಲಾಯಿತು.

ನಾನು ನೀಡಿರುವ ಒಟ್ಟು ವರದಿಯನ್ನು, ನಕಾಶೆಗಳನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ವರದಿಯನ್ನು ಒಟ್ಟಾಗಿ ನಿಸಿ.2 ಎಂದೂ, ಸಾಕ್ಷಿಯ ಸಹಿಯನ್ನು ನಿಸಿ.2(ಎ) ಎಂದು ಗುರುತಿಸಲಾಯಿತು. ಮಹಜರನ್ನು ನಿಸಿ.3 ಎಂದೂ, ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಸಿ.3(ಎ) ಎಂದು ಗುರುತಿಸಲಾಯಿತು.

ನಾನು ನೀಡಿರುವ ಎರಡು ನಕ್ಷೆಗಳನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ನಿಸಿ.4 ಹಾಗೂ ನಿಸಿ.5 ಎಂದೂ, ಸಾಕ್ಷಿಯ ಸಹಿಗಳನ್ನು ನಿಸಿ.4(ಎ) ಹಾಗೂ ನಿಸಿ.5(ಎ) ಎಂದು ಗುರುತಿಸಲಾಯಿತು.

ನಾನು ಎರಡು ಪಾರ್ಟಿಗಳಿಗೆ ನೀಡಿದ ನೋಟಿಸಿನ ಪ್ರತಿಯನ್ನು ನೋಡಿ ಗುರುತಿಸುತ್ತೇನೆ. ಸದರಿ ನೋಟಿಸಿನ ಪ್ರತಿಯನ್ನು ನಿಸಿ.6 ಎಂದೂ, ಸಾಕ್ಷಿಯ ಸಹಿಯನ್ನು ನಿಸಿ.6(ಎ) ಗುರುತಿಸಲಾಯಿತು. ಅಂಚೆ ರಸೀದಿಗಳನ್ನು ಒಟ್ಟಾಗಿ ನಿಸಿ.7 ಎಂದು ಗುರುತಿಸಲಾಯಿತು.

**::ಪಾಟೀ ಸವಾಲು:: ಅರ್ಜಿದಾರರುಗಳ ಪರ: ಶ್ರೀ ಎಸ್ ಜಿ ಎಂ., ವಕೀಲರಿಂದ::**

ನಾನು ಸರ್ವೇಯರ್ ಆಗಿ ಸುಮಾರು 13 ವರ್ಷಗಳಿಂದ ಕೆಲಸವನ್ನು ಮಾಡುತ್ತಿದ್ದೇನೆ. ನನಗೆ ಹಿಸ್ಸೆ ಮಾಡಿಕೊಡುವ ಅನುಭವ ಇರುತ್ತದೆ. ಸರ್ವೆ ನಂಬರ್ 98/1 ಹಾಗೂ ಸರ್ವೆ ನಂಬರ್ 99 ಅಕ್ಕಪಕ್ಕದಲ್ಲಿ ಬರುವುದಿಲ್ಲ. ಸರ್ವೆ ನಂಬರ್ 98 ರ ಉತ್ತರಕ್ಕೆ ಸರ್ವೆ ನಂಬರ್ 99 ಬರುತ್ತದೆ ಎಂದರೆ ಸರಿ. ನಾನು ಗುರುತಿಸಿ ಕೊಟ್ಟಿದ್ದು ಸರ್ವೆ ನಂಬರ್ 99 ರ ಉತ್ತರ ತುದಿಗೆ ಹಾಗೂ ಸರ್ವೆ ನಂಬರ್ 98/1 ರ ದಕ್ಷಿಣ ತುದಿಗೆ ಎಂದರೆ ಸರಿ.

ಯಾರಿಗೆ ಹಿಸ್ಸೆ ಮಾಡಿಕೊಟ್ಟಾಗ ಅದು ಅನುಕೂಲವಾಗಿ ಮಾಡಿಕೊಡಬೇಕು ಎಂದರೆ ಸರಿ. ನಾನು ಮಾಡಿಕೊಟ್ಟಿರುವ ಗುರುತುಗಳನ್ನು ಅನುಕೂಲವಾಗಿ ಇರುವುದಿಲ್ಲ ವಿರುದ್ಧ ದಿಕ್ಕುಗಳಲ್ಲಿ ಬರುತ್ತದೆ ಎಂದರೆ ಸರ್ವೆ ನಂಬರ್ 98/1 ಹಾಗೂ ಸರ್ವೆ ನಂಬರ್ 99 ಅಕ್ಕಪಕ್ಕದಲ್ಲಿ ಬರುವುದಿಲ್ಲ,

ದೂರದಲ್ಲಿ ಬರುತ್ತವೆ. ಸರ್ವೆ ನಂಬರ್ 98/1 ರಲ್ಲಿ ಕೆಳಗಿನ ಭಾಗದಲ್ಲಿ ಗುರುತಿಸಿ ಹಾಗೂ ಸರ್ವೆ ನಂಬರ್ 99 ರಲ್ಲಿ ತೀರಾ ಮೇಲುಗಡೆ ಭಾಗದಲ್ಲಿ ಗುರುತಿಸಿ ನಾನು ಉದ್ದೇಶಪೂರ್ವಕವಾಗಿ ನಾನು ಈ ರೀತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಗುರುತಿಸಿದ್ದ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಲು ಯಾವುದೇ ದಾರಿ ಇರುವುದಿಲ್ಲ ಎಂದರೆ ಸರ್ಕಾರಿ ಜಾಗದ ಮೂಲಕ ಹೋಗಬೇಕು. ಸರ್ವೆ ನಂಬರ್ 100 ರಲ್ಲಿ ಯಾವುದೇ ದಾರಿ ಇರುವುದಿಲ್ಲ, ಸರ್ಕಾರಿ ಕಾಡು ಇರುತ್ತದೆ. ಸರ್ವೆ ನಂಬರ್ 98/1 ರಲ್ಲಿ ನಾನು ಗುರುತಿಸಿಕೊಟ್ಟಿರುವ ಪ್ರದೇಶವನ್ನು ಹೊರತುಪಡಿಸಿ ಎಟಿಬಿ ಅಥವಾ ಸಿಇಬಿ ಪ್ರದೇಶವನ್ನು ಗುರುತಿಸಿ ಕೊಟ್ಟರೆ ಹಾಗೂ ಸರ್ವೆ ನಂಬರ್ 99 ರಲ್ಲಿ ನಾನು ಗುರುತಿಸಿಕೊಟ್ಟಿರುವ ಪ್ರದೇಶವನ್ನು ಹೊರತುಪಡಿಸಿ ಕೆಜೆಎಫ್ ಅನ್ನು ಗುರುತಿಸಿ ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ ಹಾಗೂ ಸರ್ವೆ ನಂಬರ್ 98/1 ರ ಉತ್ತರ ದಿಕ್ಕಿನಲ್ಲಿ ಹಾಗೂ 99 ರ ದಕ್ಷಿಣ ದಿಕ್ಕಿನಲ್ಲಿ ಗುರುತು ಮಾಡಿ ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ ಎಂದರೆ ಈ ರೀತಿ ಮಾಡಿಕೊಡಬಹುದು. ನಾನು ಗುರುತಿಸಿಕೊಟ್ಟಿರುವ ಪ್ರದೇಶಗಳು ಒಂದು ಉತ್ತರ ದಿಕ್ಕಿನಲ್ಲಿ ಇದ್ದು ಇನ್ನೊಂದು ತೀರಾ ದಕ್ಷಿಣ ದಿಕ್ಕಿನಲ್ಲಿ ಇದ್ದಿದ್ದರಿಂದ ಸಮಂಜಸವಾಗುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರುಗಳಿಗೆ ಸರ್ವೆ ನಂಬರ್ 98/1 ರ ಉತ್ತರ ದಿಕ್ಕಿನಲ್ಲಿ ಹಾಗೂ ಸರ್ವೆ ನಂಬರ್ 99 ರ ದಕ್ಷಿಣ ದಿಕ್ಕಿನಲ್ಲಿ ಗುರತಿಸಿಕೊಟ್ಟರೆ ಅನುಕೂಲವಾಗುತ್ತದೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ದಿನಾಂಕಃ01/02/2025 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹಿ/-
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ )
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ